ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಪೇರ್ಷ (ದಂಡು).

ಇದೇ ವಾರಕ್ಕೆ ಹಿಂದಿನ 5 ವರ್ಷಗಳ ಅಂದಾಜು.

ಆಹಾರ ಜೆನಸಿಗಳ ಧಾರಣೆಗಳು :—

		ಪಾಲ್ಲಿ		
ಅಕ್ಕಿ ರೂಪಾಯಿ 1ಕ್ಕೆ ...	8	6	ರಿಂದ 6½ ವರಿಗೆ	ಸೇರುಗಳು.
ರಾಗಿ ,, ...	20	12	ರಿಂದ 12½ ವರಿಗೆ	

ವ್ಯವಸಾಯ ಕಾರ್ಯ—ರಾಗಿಯ ಕಟಾವು.

ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಜೆನ್ನಾಗಿದೆ.

9. ವ್ಯವಸಾಯ ಕಾರ್ಯಗಳ ಅಭಿವೃದ್ಧಿ—ವಿನೂ ಇಲ್ಲ.

ನಿಂತಿರುವ ಪೈರುಗಳು—ಹೊಸಕೋಟೆ, ಕಾರ್ಕಾಹಳ್ಳಿ, ಕ್ಲೋಸ್‌ಪೇಟೆ, ದೇವನಹಳ್ಳಿ, ಈ ತಾಲ್ಲೂಕುಗಳಲ್ಲಿ ತೊಗರಿ ಅವರೆ, ಮುಂತಾದವುಗಳೂ, ಮತ್ತು ಹೊಸಕೋಟೆ ತಾಲ್ಲೂಕಿನಲ್ಲಿ ಕಾರ್ತೀಕ ಭತ್ತವೂ, ಇವುಗಳೆಲ್ಲವೂ ಒಳ್ಳೆ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ಆದರೆ, ಮಾಗಡಿ, ಚನ್ನಪಟ್ಟಣ, ಈ ತಾಲ್ಲೂಕುಗಳಲ್ಲಿ ಕುಷ್ಕೀ ಪೈರುಗಳೂ ಮತ್ತು ಅನೇಕಲ್ಲಿನಲ್ಲಿ ಕರೆ ಕೆಳಗೆ ಇರುವ ತರೀ ಪೈರುಗಳಿಗೂ, ಮಳೆಯು ಬಹು ಅವಶ್ಯಕವಾಗಿ ಬೇಕಾಗಿದೆ. ಮಾಗಡಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಭತ್ತವು ಪೂರಾ ಬಣಾಗಿ ಹೋಗಿದೆಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರುಗಳು—ಎಲ್ಲಾ ತಾಲ್ಲೂಕುಗಳಲ್ಲಿಯೂ ರಾಗಿಯನ್ನು ಕುಯ್ಯುತ್ತಿದ್ದಾರೆ.

10. ಕಾಲದ ಆಯುತಿಯು ಸಾಧಾರಣವಾಗಿ ಜೆನ್ನಾಗಿದೆ. ಆಹಾರ ಜೆನಸಿ ಸಾಕು.

11. ಕಾರ್ಕಾಹಳ್ಳಿ, ಕ್ಲೋಸ್‌ಪೇಟೆ, ಚನ್ನಪಟ್ಟಣ, ಈ ಕಸಬಾಗಳಲ್ಲಿಯೂ ಮತ್ತು ಹೊಸಕೋಟೆ, ದೊಡ್ಡಬಳ್ಳಾಪುರ, ಕಾರ್ಕಾಹಳ್ಳಿ, ಅನೆಕಲ್, ಚನ್ನಪಟ್ಟಣ ಈ ತಾಲ್ಲೂಕುಗಳಲ್ಲಿ ಕೆಲವು ಗ್ರಾಮಗಳಲ್ಲಿಯೂ, ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಜೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ಎಲ್ಲಾ ತಾಲ್ಲೂಕುಗಳಲ್ಲಿಯೂ ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಜೆನ್ನಾಗಿದೆ.

9. ವ್ಯವಸಾಯ ಕಾರ್ಯ—ಕೋಲಾರದಲ್ಲಿಯೂ ಮತ್ತು ಗುಡಿಬಂಡೆಯಲ್ಲಿಯೂ ವೈಶಾಖಿ ಭತ್ತಕ್ಕಾಗಿ ಉಳುತ್ತಿದ್ದಾರೆ.

ನಿಂತಿರುವ ಪೈರುಗಳು—ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು ಏನೂ ಇಲ್ಲ.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿ :—

ಕೋಲಾರದಲ್ಲಿ ...	ರಾಗಿ	ಉತ್ಪತ್ತಿ ...	6 ರಿಂದ 8 ಆಣೆ ವರಿಗೆ.
ಚಿಂತಾಮಣಿಯಲ್ಲಿ ...	ಡಿಟೋ	...	6 ಆಣೆ.
ಶಿಡ್ಲಘಟ್ಟದಲ್ಲಿ ...	ಡಿಟೋ	...	6 ,,
ಚಿಕ್ಕಬಳ್ಳಾಪುರದಲ್ಲಿ ...	ಡಿಟೋ	...	8 ಆಣೆ.
ಬಾಗೇಪಲ್ಲಿಯಲ್ಲಿ ...	ಡಿಟೋ	...	4 ರಿಂದ 8 ಆಣೆ ವರಿಗೆ.
ಗುಡಿಬಂಡೆಯಲ್ಲಿ ...	ಡಿಟೋ	...	6 ಆಣೆ.
ಕೋಲಾರದಲ್ಲಿ ...	ಭತ್ತ	ಉತ್ಪತ್ತಿ ...	6 ರಿಂದ 8 ಆಣೆ ವರಿಗೆ.
ಚಿಂತಾಮಣಿಯಲ್ಲಿ ...	ಡಿಟೋ	...	4 ಆಣೆ.
ಗುಡಿಬಂಡೆಯಲ್ಲಿ ಸಾಮೆ ಮತ್ತು ಸಜ್ಜೆ	ಉತ್ಪತ್ತಿ	...	4 ರಿಂದ 6 ಆಣೆ ವರಿಗೆ.

10. ಕಾಲದ ಆಯತಿಯು ಸಾಧಾರಣವಾಗಿ ಜೆನ್ನಾಗಿದೆ. ಆಹಾರ ಜೆನಸಿ ಸಿಕ್ಕುತ್ತವೆ.

11. ಕೋಲಾರದ ಚಿನ್ನದ ಫೀಲ್ಡಿನಲ್ಲಿಯೂ, ಕಸಬಾ ಕೋಲಾರದಲ್ಲಿಯೂ ಮತ್ತು ಬೌರಿಂಗ್‌ಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿಯೂ ಪ್ಲೇಗೂ, ಮತ್ತು ಕಸಬಾ ಚಿಂತಾಮಣಿಯಲ್ಲಿಯೂ ಮತ್ತು ಅದರ ಅಜುಬಾಜು ಗ್ರಾಮಗಳಲ್ಲಿ ಸೀತಾಳೆಸಿಡುಬು, ಇವುಗಳು ಇದ್ದುಕೊಂಡು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಜೆನ್ನಾಗಿದೆ.

12. ಶಿಡ್ಲಘಟ್ಟದ ತಾಲ್ಲೂಕಿನ ಜಂಗಮಕೋಟೆ ಜೋಬಿಗೆ ಸೇರಿದ ಕೆಲವು ಗ್ರಾಮಗಳಲ್ಲಿ "ಸಪ್ಪೇ ರೋಗವು" ಇರುವದು ಹೊರ್ತು, ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಜೆನ್ನಾಗಿದೆ.

9. ನಿಂತಿರುವ ಪೈರುಗಳು—ಸಮಾಧಾನದ ಸ್ಥಿತಿಯಲ್ಲಿವೆ.

ಬಿತ್ತನೆಯಾದ ಪೈರುಗಳು—ಮದ್ದಗಿರಿ, ಸಿರ್ಯ, ತಿಪಟೂರು, ಕೊರ್ಟಗೆರೆ, ತುರುವೇಕೆರೆ ಇವುಗಳಲ್ಲಿ ಕಡಲೆ; ಸಿರ್ಯ, ತಿಪಟೂರು, ಕೊರ್ಟಗೆರೆ ಇವುಗಳಲ್ಲಿ ಜೋಳ; ಸಿರ್ಯದಲ್ಲಿ ಭತ್ತ; ಮದ್ದಗಿರಿಯಲ್ಲಿ ಗೋಧಿ ಮತ್ತು ಕೊರ್ಟಗೆರೆಯಲ್ಲಿ ಕುಸುಬೆ.

ಕುಯ್ಯಲಾದ ಪೈರುಗಳು— ಎಲ್ಲಾ ತಾಲ್ಲೂಕುಗಳಲ್ಲಿಯೂ ರಾಗಿ; ಮದ್ದಗಿರಿಯಲ್ಲಿ ಜೋಳ; ಚಿಕ್ಕನಾಯಕನಹಳ್ಳಿ, ಪಾವಗಡ, ಇವುಗಳಲ್ಲಿ ನವಣೆ; ಪಾವಗಡ, ಇವುಗಳಲ್ಲಿ ಸಾವೆ; ಚಿಕ್ಕನಾಯಕನಹಳ್ಳಿ, ಸೀರ್ಯ, ತಿಪಟೂರು, ಪಾವಗಡ, ಇವುಗಳಲ್ಲಿ ನವಣೆ; ಮದ್ದಗಿರಿ, ಸೀರ್ಯ, ಗುಬ್ಬಿ, ಕೊರ್ಟಗರೆ, ಇವುಗಳಲ್ಲಿ ಭತ್ತ; ಸೀರ್ಯದಲ್ಲಿ ಹುರುಳಿ; ತಿಪಟೂರಿನಲ್ಲಿ ಸಜ್ಜೆ ಮತ್ತು ಬರಗು; ಮತ್ತು ಪಾವಗಡದಲ್ಲಿ ಹಾರಕ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸು ಸಾಕು.

11. ತುಮಕೂರು, ಚಿಕ್ಕನಾಯಕನಹಳ್ಳಿ ಈ ಕಸಬಾಗಳಲ್ಲಿ ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಸಾಧಾರಣ ಚೆನ್ನಾಗಿದೆ

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕಾರ್ಯಗಳು— ನಂಜನಗೂಡು ತಾಲ್ಲೂಕಿನ ಬಿಲಿಗೆರೇ ಹೋಬಳಿಯ ಕೆಲವು ಭಾಗಗಳಲ್ಲಿ ಕಾರ್ ಬೀಜವನ್ನು ಬಿತ್ತುವದಕ್ಕಾಗಿ ಕುಷ್ಕೀ ಭೂವಿಗಳನ್ನು ಉಳುತ್ತಿದ್ದಾರೆ.

ನಿಂತಿರುವ ಪೈರುಗಳು— ಮೈಸೂರು, ಚಾಮರಾಜನಗರ, ಶ್ರೀರಂಗಪಟ್ಟಣ, ಪುಣನೂರು, ಪೆಗ್ಗಡದೇವನಕೋಟೆ, ಗುಂಡ್ಲುಪೇಟೆ, ನಂಜನಗೂಡು, ಟಿ. ನರಸೀಪುರ, ಮಳವಳ್ಳಿ, ಮಂಡ್ಯ, ಕೃಷ್ಣರಾಜಪೇಟೆ, ಈ ತಾಲ್ಲೂಕುಗಳಲ್ಲಿ ಭತ್ತ; ರಾಗಿ, ತೊಗರಿ, ಹರಳು, ಅವರೆ, ಹುರುಳಿ, ಮುಂತಾದವುಗಳು ಚೆನ್ನಾಗಿವೆಯೆಂದು ರಿಪೋರ್ಟಾಗಿದೆ. ಆದರೆ, ನಂಜನಗೂಡು, ಮಳವಳ್ಳಿ, ನಾಗಮಂಗಲ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕುಷ್ಕೀ ಪೈರುಗಳಿಗೆ ಮಳೆಯು ಬೇಕಾಗಿದೆಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರುಗಳು—ಮೈಸೂರಿನ ಕೆಲವು ಭಾಗಗಳಲ್ಲಿ ರಾಗಿ, ಉದ್ದು. ಹೆಸರು, ಹಲಸಂದೆ ಮತ್ತು ಕಾಡು ಹುಚ್ಚೆಳ್ಳು; ಚಾಮರಾಜನಗರ, ಮಳವಳ್ಳಿ, ಇವುಗಳ ಕೆಲವು ಭಾಗಗಳಲ್ಲಿ ರಾಗಿ ಮತ್ತು ಸಾಮೆ; ಶ್ರೀರಂಗಪಟ್ಟಣದ ಕೆಲವು ಭಾಗಗಳಲ್ಲಿ ಭತ್ತ ಮತ್ತು ರಾಗಿ; ಎಡತೊರೆಯ ಕೆಲವು ಭಾಗಗಳಲ್ಲಿ ಭತ್ತ; ನಂಜನಗೂಡಿನ ಕೆಲವು ಭಾಗಗಳಲ್ಲಿ ರಾಗಿ, ಹಲಸಂದೆ, ಉದ್ದು ಮತ್ತು ಹೆಸರು; ಮತ್ತು ಕೃಷ್ಣರಾಜಪೇಟೆಯ ಕೆಲವು ಭಾಗಗಳಲ್ಲಿ ರಾಗಿ.

10. ಕಾಲದ ಆಯುತಿಯು ಚೆನ್ನಾಗಿದೆ. ನಂಜನಗೂಡು, ಮಳವಳ್ಳಿ, ನಾಗಮಂಗಲ ಈ ತಾಲ್ಲೂಕುಗಳಲ್ಲಿ ಕುಷ್ಕೀ ಪೈರುಗಳಿಗೆ ಮಳೆಯು ಬೇಕಾಗಿದೆ. ರೈತರಲ್ಲಿಯೂ ಮತ್ತು ವರ್ತಕರಲ್ಲಿಯೂ ಸಾಕಾದಷ್ಟು ಆಹಾರ ಜಿನಸು ಇವೆಯೆಂದು ರಿಪೋರ್ಟಾಗಿದೆ.

11. ಕೆಲವು ಜಾಗಗಳಲ್ಲಿ ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಮಿಕ್ಕ ಎಲ್ಲಾ ಸ್ಥಳಗಳಲ್ಲಿಯೂ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆಯೆಂದು ರಿಪೋರ್ಟಾಗಿದೆ. ಎಲ್ಲಾ ತಾಲ್ಲೂಕುಗಳಲ್ಲಿಯೂ ನೀರೂ, ಹುಲ್ಲೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಭತ್ತ, ಕಬ್ಬು, ಅವರೆ, ತೊಗರಿ, ಮೆಣಸಿನಕಾಯಿ, ರಾಗಿ, ಹುರುಳಿ, ಕಾಡು ಹುಚ್ಚೆಳ್ಳು, ಮುಂತಾದವುಗಳು ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ಆದರೆ, ಅರಕೇಕೆರೆ ತಾಲ್ಲೂಕಿನಲ್ಲಿ ಮಳೇ ಇಲ್ಲದ್ದರಿಂದ ರಾಗಿಯು ಬಹಳ ಕೆಟ್ಟದೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರು—ಅರಕೇಕೆರೆ ತಾಲ್ಲೂಕಿನಲ್ಲಿ ಕಡಲೆಯನ್ನು ಬಿತ್ತುತ್ತಿದ್ದಾರೆ.

ಕುಯ್ಯಲಾದ ಪೈರುಗಳು—ಹಾಸನ, ಮಂಜರಾಬಾದ್, ಬೇಲೂರು, ಈ ತಾಲ್ಲೂಕುಗಳಲ್ಲಿಯೂ ಮತ್ತು ಆಲೂರು ಸಬ್ ತಾಲ್ಲೂಕಿನಲ್ಲಿಯೂ ಭತ್ತ; ಚನ್ನರಾಯಪಟ್ಟಣದ ತಾಲ್ಲೂಕಿನಲ್ಲಿಯೂ ಮತ್ತು ಆಲೂರು ಸಬ್ ತಾಲ್ಲೂಕಿನಲ್ಲಿಯೂ ಕಬ್ಬು; ಚನ್ನರಾಯಪಟ್ಟಣದ ತಾಲ್ಲೂಕಿನಲ್ಲಿ ರಾಗಿ; ಹೊಳೇನರಸೀಪುರದ ತಾಲ್ಲೂಕಿನಲ್ಲಿ ದೊಡ್ಡರಾಗಿ; ಇವುಗಳು ಕುಯ್ಯಲಾಗುತ್ತಿವೆ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಹಾಸನ, ಬೇಲೂರು, ಚನ್ನರಾಯಪಟ್ಟಣ ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ಡಿಸ್ಟ್ರಿಕ್ಟಿನ ಎಲ್ಲಾ ಕಡೆಗಳಲ್ಲಿಯೂ ನೀರೂ ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಯಾವವೆಂದರೆ, ಹುರುಳಿ, ತೊಗರಿ, ಅವರೆ, ಕಡಲೆ, ಹರಳು, ಮೆಣಸಿನಕಾಯಿ; ಇವುಗಳು ಒಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು—ಎಲ್ಲಾ ತಾಲ್ಲೂಕುಗಳಲ್ಲಿಯೂ ಭತ್ತ; ಶಿವಮೊಗ್ಗ, ಚನ್ನಗಿರಿ, ಹೊನ್ನಾಳಿ, ಶಿಕಾರಿಪುರ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ರಾಗಿ; ಹುಚ್ಚೆಳ್ಳು, ಉದ್ದು, ಹೆಸರು, ಜೋಳ, ನವಣೆ, ಸಾವೆ; ಇವುಗಳೆಲ್ಲಾ ಕುಯ್ಯಲಾಗುತ್ತಿವೆ. ಡಿಸ್ಟ್ರಿಕ್ಟಿನ ಮಲನಾಡು ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಅಡಿಕೆಯ ಕಟಾವು ಆಗುತ್ತಿದೆ.

10. ಕಾಲದ ಆಯತಿಯು ಸಾಧಾರಣವಾಗಿ ಚೆನ್ನಾಗಿದೆ. ಸಾಕಾದಷ್ಟು ಆಹಾರ ಜಿನಸು ಸಿಕ್ಕುತ್ತವೆ.

11. ಸೊರಬ ತಾಲ್ಲೂಕಿನಲ್ಲಿ ಜೀವವು ಗ್ರಾಮಗಳಲ್ಲಿ ಸಿಡುಬೂ, ಮತ್ತು ಶಿವಮೊಗ್ಗ, ಹೊನ್ನಾಳಿ, ತೀರ್ಥಹಳ್ಳಿ ಈ ತಾ
ಕುಗಳಲ್ಲಿಯೂ ಮತ್ತು ಕುಂಸಿ ಸಬ್ ತಾಲ್ಲೂಕಿನಲ್ಲಿದ್ದೂ ಪ್ಲೇಗೂ ಎವುಗಳು ಇರುವದು ಹೊರ್ತು, ಜನಾರೋಗ್ಯವು ಸಾಧಾ
ವಾಗಿ ಚೆನ್ನಾಗಿದೆ.

12. ಶಿವಮೊಗ್ಗ, ಶಿಕಾರಿಪುರ, ಸೊರಬ, ಈ ತಾಲ್ಲೂಕುಗಳ ಮತ್ತು ಕುಂಸಿ ಸಬ್ ತಾಲ್ಲೂಕಿನ ಕೆಲವು ಭಾಗಗ
ಗೋಮಾರೀ ರೋಗವು ಇರುತ್ತಲಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಚಿಕ್ಕಮಗಳೂರಿನಲ್ಲಿ ಭತ್ತ, ಕಬ್ಬು, ಗೋಧಿ, ಅವರೆ, ಹುರುಳಿ, ಕಾಫಿ, ಕಡಲೆ, ಕಡ
ನಲ್ಲಿ ಹುರುಳಿ, ಅವರೆ, ವೆಣಸಿನಕಾಯಿ, ಜೋಳ, ರಾಗಿ, ಕಬ್ಬು; ತರೀಕೆರೆಯಲ್ಲಿ ಭತ್ತ, ರಾಗಿ, ಜೋಳ, ಅವರೆ, ತೊಗರಿ;
ಸ್ಪದಲ್ಲಿ ಭತ್ತ, ಕಬ್ಬು, ಕಾಫಿ, ಮೆಣಸು ಅಡಿಕೆ; ಮೂಡಿಗೆರೆಯಲ್ಲಿ ಭತ್ತ, ರಾಗಿ, ಅಡಿಕೆ, ಕಾಫಿ; ಎಡೇಹಳ್ಳಿಯಲ್ಲಿ ಕಾಫಿ, ಕ
ಭತ್ತ; ಶೃಂಗೇರಿಯಲ್ಲಿ ಭತ್ತ, ಅಡಿಕೆ; ಇವುಗಳೆಲ್ಲಾ ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ಆದರೆ, ಎಡೇಹಳ್ಳಿಯಲ್ಲಿ ಅ
ಫಸಲಿಗೆ "ಕೊಳೇ ರೋಗವು" ಹತ್ತಿದೆಯೆಂದೂ, ಮತ್ತು ಕಡೂರಿನಲ್ಲಿ ಹರಳಿಗೆ "ಕೊಂಡ್ಲೀ ಹುಳುವು" ಹಿಡಿದು ಇದೆ
ದೂ, ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಮೆಂತ್ಯ, ಹುಚ್ಚೆಳ್ಳು, ಧನಿಯ, ಬಿಳ್ಳುಳ್ಳಿ, ಈರುಳ್ಳಿ, ಇವುಗಳು ಚಿಕ್ಕಮಗಳೂರಿನಲ್ಲಿ ಬ
ಳ್ಪಡುತ್ತಿವೆ.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿ.

ಚಿಕ್ಕಮಗಳೂರಿನಲ್ಲಿ	... ರಾಗಿ ಮತ್ತು ಭತ್ತ	...	ಉತ್ಪತ್ತಿ 12 ಆಣೆ
ಕಡೂರಿನಲ್ಲಿ	... ರಾಗಿ, ಮತ್ತು ಕಬ್ಬು	...	,, 8 ,,
ತರೀಕೆರೆಯಲ್ಲಿ	... ರಾಗಿ	...	ಡಿಟೋ
	ಭತ್ತ ಮತ್ತು ಜೋಳ	...	ಉತ್ಪತ್ತಿ 12 ಆಣೆ.
ಕೊಪ್ಪದಲ್ಲಿ	... ಅಡಿಕೆ	...	,, 5 ರಿಂದ 6 ಆಣೆ ವರಿಗೆ
ಮೂಡಿಗೆರೆಯಲ್ಲಿ	... ರಾಗಿ	...	,, 4 ಆಣೆ.
	ಕಾಫಿ ಮತ್ತು ಯಾಲಕ್ಕಿ	...	,, 8
ಎಡೇಹಳ್ಳಿಯಲ್ಲಿ	... ಭತ್ತ ಮತ್ತು ಅಡಿಕೆ	...	,, 12
ಶೃಂಗೇರಿಯಲ್ಲಿ	... ಸ್ವಲ್ಪ ಅಡಿಕೆ.		

10. ಕಾಲದ ಆಯತಿಯು ಚೆನ್ನಾಗಿದೆ. ಆದರೆ ಕಡೂರು, ಕೊಪ್ಪ, ತರೀಕೆರೆ, ಈ ತಾಲ್ಲೂಕುಗಳಲ್ಲಿ ಮಳೆಯು ಬೇಕಾಗಿ
ದೆಯೆಂದು ರಿಪೋರ್ಟಾಗಿದೆ. ಆಹಾರ ಜಿನಸು ಸಾಕು.

11. ಚಿಕ್ಕಮಗಳೂರು, ಕಡೂರು, ಈ ತಾಲ್ಲೂಕುಗಳ ಕೆಲವು ಗ್ರಾಮಗಳಲ್ಲಿ ಪ್ಲೇಗ್ ಇರುವದು ಹೊರ್ತು, ಜನಾರೋ
ಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ಚಿಕ್ಕಮಗಳೂರು, ಮೂಡಿಗೆರೆ ಈ ತಾಲ್ಲೂಕುಗಳಲ್ಲಿ "ಪೊಡ
ರೋಗವು" ಇನ್ನೂ ಇರುತ್ತಲಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಮಳೆ ಇಲ್ಲದ್ದರಿಂದ ಒಣಗಿ ಹೋಗುತ್ತಿವೆ.

ಬಿತ್ತನೆಯಾದ ಪೈರುಗಳು—ಏನೂ ಇಲ್ಲ.

ಕುಯ್ಯಲಾದ ಪೈರುಗಳು—ಚಿತ್ರದುರ್ಗ, ಹೊಳಲ್ಕೆರೆ, ದೇವನಗೆರೆ, ಚಳ್ಳಕೆರೆ, ಜಗಲೂರು, ಈ ತಾಲ್ಲೂಕುಗಳಲ್ಲಿ ರಾಗಿ,
ನವಣೆ ಜೋಳ ಮತ್ತು ಸಾವೆ; ಉತ್ಪತ್ತಿ 4 ರಿಂದ 8 ಆಣೆ ವರಿಗೆ. ಚಿತ್ರದುರ್ಗ, ಹೊಳಲ್ಕೆರೆ, ದೇವನಗೆರೆ
ಈ ತಾಲ್ಲೂಕುಗಳಲ್ಲಿ ಭತ್ತ; ಉತ್ಪತ್ತಿ 6 ರಿಂದ 8 ಆಣೆ ವರಿಗೆ. ಜಗಲೂರು ತಾಲ್ಲೂಕಿನಲ್ಲಿ ಹುಚ್ಚೆಳ್ಳು, ಉತ್ಪತ್ತಿ
8 ಆಣೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ದೇವನಗೆರೆ, ಹೊಳಲ್ಕೆರೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗ್ ಇರುವದು ಹೊರ್ತು, ಜನಾರೋ
ವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು